ಪಿ.ಡಬ್ಲ್ಯೂ: 1.

ದಿನಾಂಕ: **04-01-2020** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ಶ್ರೀ: ವಕೀಲರಿಂದ:

ನಾನು ಮುಖ್ಯ ವಿಚಾರಣೆಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ.. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ ಹಾಗೂ ಅವು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸುತ್ತೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿನ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈಗಾಗಲೇ ದಾಖಲೇಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆಗಗೊಳಿಸಬೇಕೆಂದು ಕೋರಿಕೊಳ್ಳುತ್ತೇನೆ.

**1.** ಪ್ರತಿವಾದಿ ಬರೆದುಕೊಟ್ಟಿರುವ ಸ್ಥಿರ ಸ್ವತ್ತಿನ ಭೋಗ್ಯ ಪತ್ರ ನಿಪಿ-**1** ಎಂದು, ಅದರ ಮೇಲೆ ಪ್ರತಿವಾದಿಯ ಸಹಿ ಇದ್ದು ಅವುಗಳನ್ನು ನೋಡಿ ಗುರುತಿಸಿದರ ಮೇರೆಗೆ ಅವುಗಳನ್ನು **1**(ಎ) ರಿಂದ **1**(ಸಿ) ಎಂದು ಗುರುತಿಸಲಾಯಿತು. ವಾದಿಯ ಸಹಿಯನ್ನು ನಿಪಿ-**1** ಡಿ ಎಂದು ಗುರುತಿಸಲಾಯಿತು. ಹಾಗೂ ಸಾಕ್ಷಿದಾರರ ಸಹಿಯನ್ನು ನಿಪಿ ಇ ಮತ್ತು ಎಫ್ ಎಂದು ಗುರುತಿಸಲಾಯಿತು.

**2.** ನೋಟೀಸಿನ ಕಛೇರಿ ಪ್ರತಿ ನಿಪಿ-**2** ಎಂದು,

**3.** ಒಂದು ಮತ್ತು ಮೂರನೇ ಪ್ರತಿವಾದಿಗೆ ಜಾರಿಯಾಗದೇ ವಾಪಸ್ಸು ಬಂದಿರುವ ನೋಟಿಸ್ಸು ತೆರೆದ ನ್ಯಾ.ದಲ್ಲಿ ಒಡೆದು ಅವುಗಳನ್ನು ನಿಪಿ-**3** ಮತ್ತು **4** ಎಂದು ಅದರೊಳಗಿರುವ ನೋಟಿಸಿನ ಪ್ರತಿಯನ್ನು ನಿಪಿ **3**(ಎ) ಮತ್ತು **4**(ಎ) ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.

This is a True Copy of the Court Records Online. Authenticated @ districts.ecourtsindia.com/cnr/KAMS310006802017/truecopy/order-1.pdf